**ದಿನಾಂಕಃ 05.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ನಾನು ದ್ವಿತಿಯ ಪಿಯುಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ಅಪಘಾತ ರೈಲ್ವೆ ನಿಲ್ದಾಣದ ಬಳಿ ಸಂಭವಿಸಿರುತ್ತದೆ. ಸದರಿ ಸ್ಥಳದಲ್ಲಿ ವಾಹನ ದಟ್ಟಣೆ ಇರುತ್ತದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ವಾಹನ ದಟ್ಟಣೆ ಇರುತ್ತದೆ, ಆದರೆ ಅಪಘಾತವಾದಾಗ ಅಷ್ಟಾಗಿ ವಾಹನ ಸಂಚಾರ ಇರಲಿಲ್ಲ. ನಾವು ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದೆವು. ನನ್ನ ಗಂಡನ ವಾಹನ ಚಾಲನೆ ಮಾಡುತ್ತಿದ್ದು, ಅವರಿಗೆ ಚಾಲನಾ ಪರವಾನಗಿ ಇತ್ತು. ಸದರಿ ದಾಖಲಾತಿಯನ್ನು ಹಾಜರಪಡಿಸಿಲ್ಲ ಮತ್ತು ಹಾಜರುಪಡಿಸಲು ತೊಂದರೆ ಇಲ್ಲ. ನಮ್ಮ ವಾಹನದ ಮುಂಭಾಗದಲ್ಲಿ ಸುಮಾರು 3-4 ವಾಹನಗಳು ಹೋಗುತ್ತಿದ್ದು, ಅವು ಯಾವ ಮಾದರಿಯ ವಾಹನಗಳು ಎಂದು ಹೇಳಲು ಆಗುವುದಿಲ್ಲ. ನಮ್ಮ ಎದುರಿನಿಂದ ಎಷ್ಟು ವಾಹನ ಬರುತ್ತಿದ್ದವು ಎಂದು ಹೇಳಲು ಆಗುವುದಿಲ್ಲ. ಆಪಾದಿತ ವಾಹನ ಬರುವ ಪೂರ್ವದಲ್ಲಿ ಇತರ ವಾಹನಗಳು ಚಲಿಸಿರುತ್ತವೆ ಎಂದರೆ ಸರಿ. ನಾವು ತರಕಾರಿ ತರಲು ಹೋಗುತ್ತಿದ್ದೆವು. ಆ ಸಂದರ್ಭದಲ್ಲಿ ನನ್ನ ಗಂಡ ಆತರುದಿಂದ ಚಾಲನೆ ಮಾಡುತ್ತಿದ್ದ ಪರಿಣಾಮ ಎದುರಿನಿಂದ ಬಂದ ವಾಹನಕ್ಕೆ ಡಿಕ್ಕಿಪಡಿಸಿ ಅಪಘಾತ ಮಾಡಿರುತ್ತಾರೆ ಎಂದರೆ ಸರಿ. ಆಪಾದಿತ ವಾಹನದ ಚಾಲಕ ನಿಯಮಾನುಸಾರವಾಗಿ ವಾಹವನ್ನು ನಿಧಾನಗತಿಯಲ್ಲಿ ಚಾಲನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆಪಾದಿತ ವಾಹನದ ಚಾಲಕ ಮದ್ಯ ಸೇವನೆ ಮಾಡಿ ವಾಹನ ಚಾಲನೆ ಮಾಡುತ್ತಿದ್ದನು. ಆ ಬಗ್ಗೆ ಅಂತಿಮ ವರದಿಯಲ್ಲಿ ನಮೂದು ಇದೆಯಾ ಎಂದರೆ ಇದೆ ಎಂದು ನುಡಿಯುತ್ತಾರೆ. ಸದರಿ ವಿಚಾರವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಂಶವೃಕ್ಷವನ್ನು ಹಾಜರುಪಡಿಸಿಲ್ಲ ಮತ್ತು ಹಾಜರುಪಡಿಸಲು ತೊಂದರೆ ಇಲ್ಲ.

1ನೇ ಎದುರುದಾರರಿಗೂ, ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1ನೇ ಎದುರುದಾರರು ಆಪಾದಿತ ವಾಹನವನ್ನು 3ನೇ ಎದುರುದಾರರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಅಪಘಾತವಾದ ಸಮಯದಲ್ಲಿ 1ನೇ ಎದುರುದಾರರು ವಾಹನದ ಮಾಲೀಕರು ಆಗಿರಲಿಲ್ಲ ಮತ್ತು ವಾಹನದ ಸ್ವಾಧೀನದಲ್ಲಿಯೂ ಸಹ ಇರಲಿಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. 1ನೇ ಎದುರುದಾರರು ಪರಿಹಾರ ಪಾವತಿಸಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. 1ನೇ ಎದುರುದಾರರು ವಾಹನದ ಮಾಲೀಕರು ಆಗಿರದೇ ಇರುವ ಕಾರಣ ನಮಗೆ ಪರಿಹಾರ ನೀಡಲು ಬದ್ದರಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ 1ನೇ ಎದುರುದಾರರನ್ನು ಅನಾವಶ್ಯಕವಾಗಿ ಪಕ್ಷಕಾರರನ್ನಾಗಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ.

ಅಪಘಾತವಾದಾಗ ನನಗೆ 35 ವರ್ಷ ವಯಸ್ಸು ಆಗಿದ್ದು, ಆ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ, ಆದರೆ ಶಾಲಾ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ನನ್ನ ಕೆಲಸ ಮತ್ತು ಆದಾಯಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ನಾನು ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಿಲ್ಲ. ಆದ ಕಾರಣ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಗಾರ್ಮೆಂಟ್ಸ್ ನಲ್ಲಿ ಕೆಲಸಕ್ಕೆ ಹೋಗದೇ ಇರುವುದರಿಂದ ನನಗೆ ಯಾವುದೇ ರೀತಿಯ ಆದಾಯ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಧರ್ಮಸ್ಥಳ ಸಂಘದಲ್ಲಿ ಕೆಲಸಕ್ಕೆ ಹೋಗುತ್ತಿದ್ದೆ ಎಂದು ನುಡಿಯುತ್ತಾರೆ.

ನಾನು ಮೊದಲಿನಂತೆ ಈಗಲೂ ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಒಬ್ಬಳೇ ಹಾಜರಾಗುತ್ತಿದ್ದೇನೆ ಎಂದರೆ ಸರಿ. ನನ್ನ ಕೆಲಸಗಳನ್ನು ಸ್ವತಂತ್ರವಾಗಿ ಮಾಡಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಗನ್ಯೂನ್ಯತಾ ಪ್ರಮಾಣ

ಪತ್ರವನ್ನು ಹಾಜರುಪಡಿಸಿಲ್ಲ. ವೈದ್ಯರ ಬಳಿ ಚಿಕಿತ್ಸೆ ಪಡೆದಿದ್ದು, ಆ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನನಗೆ ಅಂಗನ್ಯೂನ್ಯತೆ ಇಲ್ಲದ ಕಾರಣ ಸಂಬಂಧಪಟ್ಟ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**